**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 267/2016**

| | | |
|---|---|---|
| ಸಾಕ್ಷಿಯ ಹೆಸರುಃ | ಶರಣಯ್ಯ | ಪ್ರಾಸಾಃ 1 |
| ಗಂಡನ/ತಂದೆಯ ಹೆಸರುಃ | ತ್ರಿಪುರಾಂತಯ್ಯ | ಚಾಸಾಃ 1 |
| ವಯಸ್ಸುಃ | 70 ವರ್ಷ | ದಿಃ 20-01-2024 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ನೀಲಹಳ್ಳಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾಃ 5 ನನ್ನ ಮಗ. ಚಾಸಾಃ 6 ನನ್ನ ಸಹೋದರ ನನಗೆ ಚಾಸಾಃ 7 ಮತ್ತು 8 ರವರು ನನ್ನ ಸಹೋದರನ ಮಕ್ಕಳು. ಆರೋಪಿತರ ಪರಿಚಯವಿದೆ. ದಿನಾಂಕಃ 27-06-2015 ರಂದು ಜಗಳವಾಗಿದ್ದರಿಂದ ನಾನು 6 ತಿಂಗಳ ಕಾಲ ಊರಲ್ಲಿ ಇರಲಿಲ್ಲ. ದಿನಾಂಕಃ 30-01-2016 ರಂದು ಮನೆ ಸ್ವಚ್ಚ ಮಾಡಲು ನಾನು ಹೋಗಿರುತ್ತೇನೆ. ಉಳಿದಿರುವ ಮನೆ ಸ್ವಚ್ಚ ಮಾಡಲು ನಾಳೆ ಬರೋಣ ಅಂತ ಹೇಳಿ ಮರಳಿ ಬಂದಿರುತ್ತೇನೆ. ಸುಮಾರು ರಾತ್ರಿಃ 8.00 ಗಂಟೆಗೆ ಚಾಸಾಃ 4 ರವರು ಕರೆ ಮಾಡಿ ಆರೋಪಿತರು ಅತಿಕ್ರಮಣ ಮಾಡಿ ಮನೆ ಪ್ರವೇಶ ಮಾಡಿರುತ್ತಾರೆ ಮತ್ತು ಕಲ್ಲು ಮತ್ತು ರಾಡುಗಳಿಂದ ಮನೆಯನ್ನು ಒಡೆದು ಹಾಕಿರುತ್ತಾರೆ ಎಂದು ಹೇಳಿರುತ್ತಾರೆ. ನಾನು ಮರುದಿನ 7.00 ಗಂಟೆ ಸುಮಾರಿಗೆ ಮನೆಯ ಹತ್ತಿರ ಹೋದಾಗ ಚಾಸಾಃ 4 ರವರು ಹೇಳಿದ ಹಾಗೆ ನಿಜವಾಗಿರುತ್ತದೆ. ನಂತರ ನಾನು ಪೊಲಿಸ ಠಾಣೆಗೆ ಹೋಗಿ ಆರೊಪಿತರ ವಿರುದ್ದ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ಗುರುತಿಸಿರುವುದರಿಂದ ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೊಲಿಸರು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ ನಾನು ಪೊಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ. ನಾನು ಮರು ಹೇಳಿಕೆಯನ್ನು ನೀಡಿದ ನಂತರ ಆರೋಪಿ ನಂಬರ 16 ಮತ್ತು 17 ರವರ ಹೆಸರು ಸೇರ್ಪಡೆ ಮಾಡಿರುತ್ತಾರೆ. ಒಂದು ಸೀಮಂಟ್ ತುಕಡಿ ಪತ್ರಾಸ, ಒಂದು ಹಂಚು, ಎರಡು ಕಬ್ಬಿಣದ

ರಾಡುಗಳು, 15 ಕಲ್ಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ರಿಂದ 3 ಮತ್ತು 15 ಕಲ್ಲುಗಳು ಇರುವ ಬ್ಯಾಗನ್ನು ಮು. ಮಾ. 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

ನನಗೆ ಮನೆ ಒಡೆದು ಹಾಕಿದ್ದರಿಂದ ನನಗೆ 75,000/- ರೂ. ಅಷ್ಟು ನಷ್ಟವಾಗಿರುತ್ತದೆ ಎಂದರೆ ಸರಿ.

**ಪಾಟಿ ಸವಾಲು :ಆರೋಪಿ ಪರ ಶ್ರೀ. ಜಿ. ಎಸ್. ಎನ್. ವಕೀಲರಿಂದ.**

1. ನಾನು ಸುಮಾರು 12 ವರ್ಷಗಳಿಂದ ನಾನು ನೀಲಹಳ್ಳಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತರ ನಡುವೆ ಆಂಜನೇಯ ಗುಡಿಯ ಸಲುವಾಗಿ ತಕರಾರು ಇರುತ್ತದೆ ಎಂದರೆ ಸರಿ. ಆರೋಪಿತರು ನನ್ನ ವಿರುದ್ಧ ಆಂಜನೇಯ ದೇವಸ್ಥಾನದ ಸಲುವಾಗಿ ಸಿವಿಲ್ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನ ವಿರುದ್ಧ ಮಾಡಿರುವ ಕ್ರಿಮಿನಲ್ ಮೊಕದ್ದಮೆ ಜಿಲ್ಲಾ ನ್ಯಾಯಾಲಯದಲ್ಲಿ ವಿಲೆವಾರಿಗೆ ಬಾಕಿ ಇದೆ ಎಂದರೆ ಸರಿ. ಸದರಿ ನನ್ನ ಮತ್ತು ಆರೋಪಿತರ ನಡುವೆ ಆಂಜನೇಯ ಗುಡಿಯ ಸಲುವಾಗಿ ಜಗಳವಿರುವುದರಿಂದ ವೈಮನಸ್ಸು ಇರುತ್ತದೆ ಎಂದರೆ ಸರಿ.

2. ನಾನು ಕಣ್ಣಾರೆ ನಡೆದ ಘಟನೆಯನ್ನು ನೋಡಿರುವುದಿಲ್ಲ. ದೂರನ್ನು ನೀಡಲು ಬೆಳಿಗ್ಗೆ 9.00 ಗಂಟೆಗೆ ಪೊಲಿಸ ಠಾಣೆಗೆ ಹೋಗಿರುತ್ತೇನೆ. ದೂರನ್ನು ನೀಡಲು ನಾನು ಮತ್ತು ಚಾಸಾಃ 5 ರವರು ಹೋಗಿರುತ್ತೇವೆ. ಸದರಿ ನಿಪಿ-1 ನ್ನು ಚಾಸಾಃ 5 ರವರು ಬರೆದಿರುತ್ತಾರೆ. ನಿಪಿ-1 ರಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನನಗೆ ಚಾಸಾಃ 4 ರವರು ನಡೆದ ಘಟನೆಯ ಬಗ್ಗೆ ತಿಳಿಸಿರುತ್ತಾರೆ ಎಂದು ನಿಪಿ-1 ರಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಆರೋಪಿತರ ವಿರುದ್ಧ ಜಾಗದ ಸಲುವಾಗಿ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಇನ್ನೊಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮು. ಮಾ. 1 ರಿಂದ 4 ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಮನೆಯಲ್ಲಿ

ಸಿಕ್ಕಿರುತ್ತವೆ ಎಂದು ನುಡಿಯುತ್ತಾರೆ. ನಾನು ಪೊಲೀಸ ಠಾಣೆಗೆ ಅದೆ ದಿನ ಎರಡು ಸಲ ಹೋಗಿರುತ್ತೇನೆ.

3. ದೂರನ್ನು ನೀಡಿದ ದಿನವೇ ಪೊಲಿಸರು ಪಂಚನಾಮೆಗೆ ಬೆಳಿಗ್ಗೆ 10.00 ಗಂಟೆಗೆ ಬಂದಿರುತ್ತಾರೆ. ಸದರಿ ಪೊಲಿಸರು ಘಟನಾ ಸ್ಥಳದಲ್ಲಿ ಅರ್ಧ ಗಂಟೆಗಳ ಕಾಲ ಇದ್ದರು. ಸದರಿ ಘಟನೆಯ ಪಂಚನಾಮೆಯ ಕಾಲದಲ್ಲಿ ನಾನು, ಚಾಸಾಃ 4 ರಿಂದ 7 ರವರು ಇದ್ದರು. ಸದರಿ ಇಷ್ಟು ಜನರನ್ನು ಹೊತುಪಡಿಸಿ ಯಾರೂ ಇರಲಿಲ್ಲ ಎಂದರೆ ಸಾಕ್ಷಿಯು ಬೇರೆಯವರು ಇದ್ದರು ಆದರೆ ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

4. ದಿನಾಂಕಃ 30-01-2016 ರಂದು ನಾನು ನನ್ನ ಮನೆ ಸ್ವಚ್ಚ ಮಾಡಲು ನೀಲಹಳ್ಳಿಗೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮು. ಮಾ. ಗಳಿಂದ ನನ್ನ ಮನೆ ಒಡೆದು 75,000/- ರೂ. ನಷ್ಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಷ್ಟವಾಗಿದ್ದರ ಬಗ್ಗೆ ಪೊಲಿಸರು ಬಂದು ನೋಡಿಕೊಂಡು ಹೋಗಿರುತ್ತಾರೆ. ಪೊಲಿಸರು ಬಂದು ಪಂಚನಾಮೆಯನ್ನು ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪೊಲಿಸರು ಮು. ಮಾ. 1 ರಿಂದ 4 ನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಆರೋಪಿತರು ಎಲ್ಲರೂ ನೀಲಹಳ್ಳಿ ಗ್ರಾಮದವರು ಎಂದರೆ ಸರಿ. ಆರೋಪಿತರು ಎಲ್ಲರೂ ಜೀವನೋಪಾಯಕ್ಕಾಗಿ ಒಕ್ಕಲುತನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಾನು ಸುಮಾರು 12 ವರ್ಷಗಳ ಕಾಲ ಊರು ಬಿಟ್ಟ ನಂತರ ಇವತ್ತೆ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಲಹಳ್ಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಅತಿಕ್ರಮಣ ಪ್ರವೇಶ ಮಾಡಿರುವುದಿಲ್ಲ, ನಷ್ಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆಂಜನೇಯ ಜಾಗದ ಸಲುವಾಗಿ ನನಗೆ ಮತ್ತು ಆರೋಪಿತರ ನಡುವೆ ವೈಮನಸ್ಸು ಇರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಂಜನೇಯ ಜಾಗವನ್ನು ನಾನು ಕಬಳಿಸಬೇಕು ಎಂಬ ಉದ್ದೇಶದಿಂದ ಆರೋಪಿತರು ತಕರಾರು ಮಾಡಿದ್ದರಿಂದ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧವನ್ನು ಮಾಡದೇ ಇದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**